

(6ನೇ ಪುಟದಿಂದ)

ಗಟ್ಟಿ ಹೊರ ಕವಚ ಹೊಂದಿರುವ ಕಮಂಡಲುಕಾಯಿಯು, ಗಿಡದ ಟೊಂಗೆಗಿಂತ ಕಾಂಡಕ್ಕೆ ಹೆಚ್ಚಾಗಿ ಬಿಡುತ್ತದೆ. ತೊಟ್ಟುಗಳು ಅತಿ ಚಿಕ್ಕದಾಗಿರುವುದರಿಂದ ಕಾಯಿಗಳು ಗಿಡಕ್ಕೆ ಅಂಟಿಕೊಂಡಂತೆ ಕಂಡು ಬರುತ್ತವೆ.  ಇವು ಸಂಪೂರ್ಣವಾಗಿ ಬೆಳೆಯಲು 7 ತಿಂಗಳು ಬೇಕಿದ್ದು, ಮಾಗಿದಾಗ ಕಾಯಿಗಳು ಮೊದಲಿದ್ದ ಹಸಿರು ಬಣ್ಣದಿಂದ ಹಳದಿ ಬಣ್ಣ ಹೊಂದುತ್ತವೆ.

## ಪ್ರಯೋಜನಗಳು:

ಕಮಂಡಲುಕಾಯಿಯ ಕವಚವು ಮರದಂತೆ ಗಟ್ಟಿಯಾಗಿರುವುದರಿಂದ, ಇತರ ಹಣ್ಣುಗಳಂತೆ, ಸುಲಿದು ತಿನ್ನಲು ಸಾಧ್ಯವಿಲ್ಲ. ಕಾಯಿಯನ್ನು ಒಡೆಯಲು ಬಲವಾದ ಪ್ರಹಾರ ಮಾಡಬೇಕಾಗುತ್ತದೆ. ಕುದುರೆಗಳು ತಮ್ಮ ಗಟ್ಟಿ ಗೊರಸಿನಿಂದ ಒಡೆದು ಒಳತಿರಳುಗಳನ್ನು ತಿನ್ನುತ್ತವೆ. ನೈಸರ್ಗಿಕವಾಗಿ ಬೀಜ ಪ್ರಸಾರ ಕುದುರೆಗಳಿಂದ ಆಗುತ್ತದೆ. ಕಮಂಡಲು ಕಾಯಿಯನ್ನು ಹಾಗೆಯೇ ಗುಂಡಿ ತೋಡಿ ನೆಟ್ಟರೆ ಗಟ್ಟಿ ಕವಚದೊಳಗಿರುವ ಬೀಜಗಳು ಮೊಳಕೆ ಒಡೆಯಲಾರವು. ಅದರ ಬೀಜವನ್ನು ನೆಟ್ಟು ಅಥವಾ ಕಾಂಡದ ತುಂಡಿನಿಂದಲೂ ಈ ಸಸ್ಯವನ್ನು ಬೆಳೆಸಬಹುದು. ಬೀಜಗಳಲ್ಲಿ ಸಸರಾಜನಕ (ಪ್ರೊಟೀನ್) ಹೇರಳವಾಗಿದ್ದು, ಸಿಹಿಯಾಗಿರುವ ಇವು ಮದ್ಯದ ರುಚಿ ಹೊಂದಿದೆ. ಇದರ ಬೀಜಗಳನ್ನು ಚಕ್ಕೆ ಮುಂತಾದ ಮಸಾಲೆ ವಸ್ತುಗಳೊಂದಿಗೆ ಬೆರೆಸಿ, ಪುಡಿ ಮಾಡಿ, ಕಾಫೀ, ಟೀ ರೀತಿಯ 'ಹೊರ್ಚಾಟ್' ಎಂಬ ಪಾನೀಯವನ್ನು ಮಧ್ಯೆ ಅಮೆರಿದಕದ ದೇಶಗಳಲ್ಲಿ ತಯಾರಿಸುತ್ತಾರೆ. ಇದರ ಬೀಜಗಳು ಹಸುಗಳ ಆಹಾರವೂ ಆಗಿದೆ.

ಬಲಿತ ಕಮಂಡಲು ಕಾಯಿಯ ಒಳತಿರುಳು ತೆಗೆದ ನಂತರ ಅದರ ಗಟ್ಟಿ ಕವಚದಿಂದ, ಕಪ್ ಬೋಗುಣಿ, ತಟ್ಟೆ ಹಾಗೂ ಪದಾರ್ಥಗಳನ್ನು ತುಂಬಿಡಲು ಡಬ್ಬಿಗಳನ್ನು ತಯಾರಿಸುತ್ತಾರೆ. ಅವುಗಳ ಹೊರ ಮೈಮೇಲೆ ಸುಂದರ ಕಲಾತ್ಮಕ ಚಿತ್ರಗಳನ್ನು ಕೊರೆಯುವರಲ್ಲದೆ, ಅಂದ ಚೆಂದದ ವರ್ಣಮಯ ಚಿತ್ತಾರವನ್ನು ಚಿತ್ರಿಸುತ್ತಾರೆ. ಈ ಕಾಯಿಗಳನ್ನು ಹಿಂದೆ ಬೇಟೆಗಾರರು ಶಿರಸ್ತ್ರಾಣವನ್ನಾಗಿ ಮಾಡಿ, ಬೇಟೆಯ ಸಮಯದಲ್ಲಿ ಬಳಸುತ್ತಿದ್ದರಂತೆ.



ಕಮಂಡಲುಕಾಯಿ ಗಿಡವು ತೇವಾಂಶವುಳ್ಳ ಭೂಮಿಯಲ್ಲೂ ಉಷ್ಣವಲಯದಲ್ಲೂ ಬೆಳೆಯುತ್ತಿದ್ದು ಹೆಚ್ಚಿನ ಆರೈಕೆಯೇನೂ ಬೇಡದ ಬರಸಹಿಷ್ಣು  ಸಸ್ಯವಾಗಿದೆ. ಭಾರತದಲ್ಲಿ ಇದು ಅಪರೂಪದ ಗಿಡವಾಗಿದ್ದು, ಉದ್ಯಾನವನಗಳಲ್ಲಿ ಅಲಂಕಾರಿಕ ಸಸ್ಯವಾಗಿ ಕೆಲವೆಡೆ ಬೆಳೆಸುವುದುಂಟು. ಮೈಸೂರಿನಲ್ಲಿರುವ ಗಣಪತಿ ಸಚ್ಚಿದಾನಂದಾಶ್ರಮದ 'ಋಷಿವನ' ಹಾಗೂ ಕರ್ನಾಟಕದ ಪ್ರಸಿದ್ಧ ಆವಾಸಿಕ ಶಾಲೆಯಾದ ಶ್ರೀ ರಾಮಕೃಷ್ಣ ವಿದ್ಯಾ ಶಾಲೆಯ ತೋಟದಲ್ಲೂ ಇದನ್ನು ನೋಡಬಹುದು.